# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 16 (73) |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11.08.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿ ಗೆ ಮೂರು ವಾರ್ಷಿಕ ಪರೀಕ್ಷೆಗಳನ್ನು ನಡೆಸಿದ ನಂತರ 2024-25ನೇ ಸಾಲಿನಲ್ಲಿ ದಾಖಲಾದ ಕ್ರೋಢೀಕೃತ ಫಲಿತಾಂಶ ಎಷ್ಟು; ಗುಣಾತ್ಮಕ ಮೌಲ್ಯಂಕ ಸೂಚ್ಯಾಂಕ ಎಷ್ಟು; ಇತರೆ ರಾಜ್ಯದ ಹಾಗೂ ಇತರ ಮಾದರಿಯ ಪಠ್ಯ ಕ್ರಮದ ವಾರ್ಷಿಕ ಪರೀಕ್ಷೆಯ ಫಲಿತಾಂಶ ಜೊತೆಗೆ ತುಲನೆ ಮಾಡಲಾಗಿದೆಯೇ; | • 2024-25 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ದಾಖಲಾದ ಕ್ರೋಢೀಕೃತ ಫಲಿತಾಂಶ (ಪರೀಕ್ಷೆ-1,2 ಮತ್ತು 3 ರ ಶಾಲಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ) 79.97% ಆಗಿರುತ್ತದೆ. ಗುಣಾತ್ಮಕ ಮೌಲ್ಯಾಂಕ ಸೂಚ್ಯಾಂಕ-66.87% ಬಿ ಗ್ರೇಡ್<br>• 2024-25 ನೇ ಸಾಲಿನ ಪಿ.ಯು.ಸಿ ಪರೀಕ್ಷೆಗೆ ದಾಖಲಾದ ಕ್ರೋಢೀಕೃತ ಫಲಿತಾಂಶ (ಪರೀಕ್ಷೆ-1,2 ಮತ್ತು 3 ರ ಶಾಲಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ) 79.81% ಆಗಿರುತ್ತದೆ. ಗುಣಾತ್ಮಕ ಮೌಲ್ಯಾಂಕ ಸೂಚ್ಯಾಂಕ ವನ್ನು ಪಿ ಯು ಸಿ ಪರೀಕ್ಷೆಗೆ ಅನ್ವಯಿಸಿರುವುದಿಲ್ಲ.<br>• ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆ 1,2,3 ಮುಗಿದಿದ್ದು, ಇತರೆ ರಾಜ್ಯದ ಹಾಗೂ ಇತರೆ ಮಾದರಿಯ ಪಠ್ಯಕ್ರಮದ ವಾರ್ಷಿಕ ಪರೀಕ್ಷೆಯ ಫಲಿತಾಂಶ ಜೊತೆಗೆ ತುಲನೆ ಮಾಡಲು ಕ್ರಮವಹಿಸಲಾಗಿದೆ. |
| ಆ) | ಇತರೆ ರಾಜ್ಯದ ಮತ್ತು ಇತರೆ ಮಾದರಿಯ ಪಠ್ಯ ಕ್ರಮದಲ್ಲಿ ಶೇಕಡಾ 99% ರಷ್ಟು ಫಲಿತಾಂಶವನ್ನು ಪಡೆಯುತ್ತಿದ್ದು, ಈ ಬಗ್ಗೆ ಪಠ್ಯ ಬೋಧನೆ, ಪರೀಕ್ಷಾ ಪದ್ಧತಿ ಹಾಗೂ ತರಗತಿಯಲ್ಲಿ ವಿದ್ಯಾರ್ಥಿಗಳ ಗರಿಷ್ಟ ಸಂಖ್ಯೆ ಇವುಗಳ ಬಗ್ಗೆ ಅಧ್ಯಯನ ನಡೆಸಲಾಗಿದೆಯೇ; | ಎಸ್. ಎಸ್ .ಎಲ್ ಸಿ ಮತ್ತು ಪಿಯುಸಿ ಪಠ್ಯಕ್ರಮದಲ್ಲಿ ಇತರೆ ರಾಜ್ಯದ ಮತ್ತು ಇತರೆ ಮಾದರಿಯ ಪಠ್ಯಕ್ರಮದಲ್ಲಿ ಶೇಕಡಾ 99% ರಷ್ಟು ಫಲಿತಾಂಶವನ್ನು ಪಡೆಯುತ್ತಿದ್ದು, ಈ ಬಗ್ಗೆ ಪಠ್ಯ ಬೋಧನೆ, ಪರೀಕ್ಷಾ ಪದ್ಧತಿ ಹಾಗೂ ತರಗತಿಯಲ್ಲಿ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆ ಇವುಗಳ ಬಗ್ಗೆ ಅಧ್ಯಯನ ನಡೆಸಿರುವುದಿಲ್ಲ. ಅಧ್ಯಯನ ನಡೆಸುವ ಬಗ್ಗೆ ಕ್ರಮವಹಿಸಲಾಗುವುದು. |
| ಇ) | ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಾರದಲ್ಲಿ ಮೂರು ದಿನ ನಿಯೋಜನೆ ಮೇಲೆ ಹಾಗೂ ಅತಿಥಿ ಉಪನ್ಯಾಸಕರಿಂದ ಬೋಧನೆ | ಉಪನ್ಯಾಸಕರ ನಿಯೋಜನೆ ಮತ್ತು ಅತಿಥಿ ಉಪನ್ಯಾಸಕರನ್ನು ಖಾಲಿ ಇರುವ ಹುದ್ದೆಗಳಿಗೆ ತೆಗೆದುಕೊಳ್ಳಲಾಗುತ್ತದೆ. ಹುದ್ದೆ ಭರ್ತಿಯಾದ ತಕ್ಷಣದಿಂದ ಉಪನ್ಯಾಸಕರ ನಿಯೋಜನೆ ಮತ್ತು ಅತಿಥಿ ಉಪನ್ಯಾಸಕರ |

| | | |
|---|---|---|
| | ಪಡೆದ ವಿದ್ಯಾರ್ಥಿಗಳ ಶೇಕಡವಾರು ಹಾಗೂ ಗುಣಾತ್ಮಕ ಮೌಲ್ಯಂಕ ಸೂಚಂಕವನ್ನು ಕಂಡು ಹಿಡಿದು ತುಲನೆ ಮಾಡಲಾಗಿದೆಯೇ; | ನೇಮಕಾತಿಯನ್ನು ರದ್ದುಗೊಳಿಸಲಾಗುತ್ತದೆ ಮತ್ತು ಪೂರ್ಣಕಾಲಿಕ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಾರೆ. |
| ಈ) | ಇತರ ರಾಜ್ಯದ ಪಠ್ಯಕ್ರಮ ಮಾದರಿಯಲ್ಲಿ ಉತ್ತಮ ಫಲಿತಾಂಶವನ್ನು ಪಡೆಯುವ ರೀತಿ ಫಲಿತಾಂಶ ಪಡೆಯಲು ಯಾವ ಕ್ರಮಕೈಗೊಳ್ಳಲಾಗಿದೆ; | 1. ಪ್ರಸ್ತುತ ರಾಜ್ಯ ಪಠ್ಯಕ್ರಮದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಉತ್ತೀರ್ಣತಾ ನಿಯಮವನ್ನು ಸಿಬಿಎಸ್ಇ ನಿಯಮದಂತೆ ಪರಿಷ್ಕರಿಸಲು ಕ್ರಮಕೈಗೊಂಡಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಪಿ 211 ಎಸ್‌ಎಲ್‌ಬಿ 2025 ದಿನಾಂಕ:24.07.2025ರಲ್ಲಿ "ಅಭ್ಯರ್ಥಿಗಳು ಆಂತರಿಕ ಮೌಲ್ಯಮಾಪನ ಮತ್ತು ಬಾಹ್ಯ ಪರೀಕ್ಷೆ ಎರಡೂ ಸೇರಿ ಒಟ್ಟಾರೆ ಸರಾಸರಿ 33% ಅಂಕಗಳನ್ನು ಪಡೆದು, ಮತ್ತು ಒಟ್ಟು 625 ಅಂಕಗಳಿಗೆ ಕನಿಷ್ಠ 206 ಅಂಕಗಳನ್ನು ಗಳಿಸಿದಲ್ಲಿ ಆಯಾ ವಿಷಯದ ಒಟ್ಟು ಅಂಕಗಳಲ್ಲಿ ಕನಿಷ್ಠ 30% ಅಂಕಗಳನ್ನು ಪಡೆದಲ್ಲಿ ಅಂತಹ ಅಭ್ಯರ್ಥಿಯನ್ನು ಉತ್ತೀರ್ಣರೆಂದು ಘೋಷಿಸಲಾಗುತ್ತದೆ." ಎಂದು ಕರಡು ನಿಯಮ ತಿದ್ದುಪಡಿಗಾಗಿ ಆಕ್ಷೇಪಣೆ ಅಥವಾ ಸಲಹೆಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ರಾಜ್ಯಪತ್ರ ಹೊರಡಿಸಲಾಗಿರುತ್ತದೆ.<br><br>2. ಪ್ರತಿ ವಿಷಯದ ಪ್ರಶ್ನೆ ಪತ್ರಿಕೆಗಳನ್ನು ಮತ್ತು ಪ್ರಶ್ನೆ ಪತ್ರಿಕೆಗಳನ್ನು ಮತ್ತು ಪ್ರಶ್ನೆ ಕೋಠಿಯನ್ನು ಸಿದ್ಧಪಡಿಸಿ ಇಲಾಖಾ ಜಾಲತಾಣದಲ್ಲಿ ಅಳವಡಿಸಲಾಗಿದೆ.<br><br>3. ಕಿರುಪರೀಕ್ಷೆ ಹಾಗೂ ಮಧ್ಯವಾರ್ಷಿಕ ಪರೀಕ್ಷೆಗಳನ್ನು ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸಲು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದೆ.<br><br>4. ಈ ಮೇಲಿನ ಪರೀಕ್ಷೆಗಳನ್ನು ನಡೆಸಿ ಮಾಲ್ಯಮಾಪನದ ನಂತರ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಗುರುತಿಸಿ ಅಂತಹ ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಬೋಧನ ತರಗತಿಗಳನ್ನು ನಡೆಸುವುದು.<br><br>5. ನಿಯಮಿತವಾಗಿ ಪಾಲಕರ ಸಭೆ ನಡೆಸಿ ವಿದ್ಯಾರ್ಥಿಗಳ ಹಾಜರಾತಿ ಹಾಗೂ ಕಲಿಕಾ ಪ್ರಗತಿ ಬಗ್ಗೆ ಮಾಹಿತಿ ನೀಡಿ, ಅವರಿಂದಲೂ ಸಹಕಾರ ಮತ್ತು ವಿದ್ಯಾರ್ಥಿಗಳ ಸಹಕಾರ ನೀಡಲು ತಿಳಿಸುವುದು.<br><br>6. ಜಿಲ್ಲಾ ಹಂತದಲ್ಲಿ ಆಯಾ ವಿಷಯಗಳ ಉಪನ್ಯಾಸಕರ ವೇದಿಕೆಯಿಂದ ಉಪನ್ಯಾಸಕರಿಗೆ ಕಾರ್ಯಾಗಾರ ನಡೆಸಿ ಸೂಕ್ತ ಪ್ರೇರೇಪಣೆ ನೀಡುವುದು. |

| | | |
|---|---|---|
| | | 7. ಪ್ರತಿದಿನ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವುದು, ಆ ತರಗತಿಗಳಲ್ಲಿ 01 ಮತ್ತು 02 ಅಂಕದ ಹಾಗೂ 05 ಅಂಕ ಪ್ರಶ್ನೆಗಳಿಗೆ ಉತ್ತರಿಸುವ ವಿಧಾನಗಳನ್ನು ತಿಳಿಸಿಕೊಡುವುದು.<br><br>8. ವಿಷಯವಾರು ಘಟಕ ಪರೀಕ್ಷೆಗಳನ್ನು ನಡೆಸಿ, ಘಟಕವಾರು ಪುನರ್ ಮನನ ತರಗತಿಗಳನ್ನು ನಡೆಸುವುದು.<br><br>9. ಗುಂಪು ಅಧ್ಯಯನಕ್ಕೆ ಪ್ರೇರೇಪಿಸುವುದು.<br><br>10.ವಿದ್ಯಾರ್ಥಿಗಳ ಗುಂಪು ರಚಿಸಿ ಪ್ರತಿ ಉಪನ್ಯಾಸಕರಿಗೆ ದತ್ತು ಪಡೆಯಲು ಕ್ರಮ ತೆಗೆದಕೊಳ್ಳುವುದು.<br><br>11.ಎಲ್ಲಾ ವಿಷಯಗಳ ಅಭ್ಯಾಸ ಪತ್ರಿಕೆಗಳನ್ನು ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಮನದಟ್ಟು ಮಾಡುವುದು.<br><br>12.ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನ ತರಗತಿಗಳನ್ನು ನಡೆಸುವುದು.<br><br>13.ಕಳೆದ ಸಾಲಿನಲ್ಲಿ ಫಲಿತಾಶ ಕಡಿಮೆ ಇರುವ ಜಿಲ್ಲೆಗಳಿಗೆ ಕೇಂದ್ರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಫಲಿತಾಂಶ ಉತ್ತಮಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ. |
| ಉ) | ರಾಜ್ಯದ ಪದವಿ ಪೂರ್ವ ಹಂತದ ಶಿಕ್ಷಣದಲ್ಲಿ ಒಂದು ತರಗತಿಯಲ್ಲಿ ಗರಿಷ್ಟ 80 ವಿದ್ಯಾರ್ಥಿಗಳನ್ನು ಅದರಲ್ಲಿಯೂ ಕೆಲವು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ತರಗತಿಯಲ್ಲಿ 100 ರಿಂದ 120 ವಿದ್ಯಾರ್ಥಿಗಳನ್ನು ಸೇರಿಸಿಕೊಂಡ ಪರಿಣಾಮಕಾರಿ ಬೋಧನೆಯೊಂದಿಗೆ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಿಲ್ಲವೆ? | ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) (ಶೈಕ್ಷಣಿಕ, ನೋಂದಣಿ ಆಡಳಿತ ಮತ್ತು ಸಹಾಯಾನುದಾನ ಇತರೆ) ನಿಯಮಗಳು ಶಿಕ್ಷಣ ನಿಯಮ-2024 ರಂತೆ ಒಂದು ತರಗತಿಯ ಗರಿಷ್ಟ ವಿದ್ಯಾರ್ಥಿಗಳ ಸಂಖ್ಯೆ 80 ಆಗಿರುತ್ತದೆ. |

ಸಂಖ್ಯೆ: ಇಪಿ 285 ಎಸ್ಎಲ್ಬಿ 2025

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ
ಸಚಿವರು.